**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ ನ್ಯಾಯಾಲಯ ತಿ.ನರಸೀಪುರ.**

**ಓ.ಎಸ್. ನಂಃ211/2018 ಡಿ.ಡಬ್ಲೂಃ 01**

ಸಾಕ್ಷಿಯನ್ನು ಇಂದು ದಿನಾಂಕಃ **01.12.2023** ರಂದು ಕರೆಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** ವಾದಿ ಪರ ಶ್ರೀ **ಎನ್.ಜಿ.ಎಂ** ವಕೀಲರಿಂದಃ

ನಾನು **2** ನೇ ಪಿಯುಸಿವರೆಗೆ ವಿಧ್ಯಾಭ್ಯಾಸ ಮಾಡಿರುತ್ತೇನೆ. ನನಗೆ ಕನ್ನಡ ಭಾಷೆ ಓದಲು ಹಾಗೂ ಬರೆಯಲು ಬರುತ್ತದೆ.

**1** ನೇ ವಾದಿ ಹಾಗೂ ಪ್ರತಿವಾದಿ ನಮ್ಮ ಗ್ರಾಮದಲ್ಲಿ ವಾಸ ಮಾಡುತ್ತಾರೆ ಎಂದರೆ ಸರಿ. ಸದರಿಯವರು ಅಕ್ಕಪಕ್ಕದ ಮನೆಯಲ್ಲಿ ವಾಸ ಮಾಡುತ್ತಾರೆ ಎಂದರೆ ಸಾಕ್ಷಿಯು ಜಂಟಿ ಮನೆಯಲ್ಲಿ ವಾಸ ಮಾಡುತ್ತಾರೆ, ಸಾಕ್ಷಿ ಮುಂದುವರಿದು ತಿಮ್ಮಯ್ಯ ಮತ್ತು ನಂಜಯ್ಯರವರು ನಾವು ಇಲ್ಲದ ಸಮಯದಲ್ಲಿ ಅಕ್ರಮವಾಗಿ ಮನೆಯನ್ನು ಕಟ್ಟಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿಯವರು ಮನೆ ಕಟ್ಟುವ ಸಮಯದಲ್ಲಿ ನಾನು ಊರಿನಲ್ಲಿ ಇರಲಿಲ್ಲ. ವಾದಿಯು ಕಾಡುಕೊತ್ತನಹಳ್ಳಿ ಗ್ರಾಮದಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ವಾದಿಗಳು ವಾಸ ಮಾಡುತ್ತಿರುವ ಮನೆಯ ಪೂರ್ವ ಭಾಗದಲ್ಲಿ ನಾವು ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದೇವೆ, ಸಾಕ್ಷಿ ಮುಂದುವರಿದು ನಮಗೆ ಸೇರಿದ **3 ¼** ಗುಂಟೆ ಜಾಗದಲ್ಲಿ ವಾದಿಗಳು ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ ಎಂದು ನುಡಿಯುತ್ತಾರೆ. ವಾದಿಗಳು ವಾಸ ಮಾಡುತ್ತಿರುವ ಮನೆಯ ಉತ್ತರ ದಿಕ್ಕಿಗೆ ರಸ್ತೆ ಹಾಗೂ ಬೊಚ್ಚನ ಸಿದ್ದೇಗೌಡರವರ ಖಾಲಿ ನಿವೇಶನ ಇರುತ್ತದೆ. ದಕ್ಷಿಣ ದಿಕ್ಕಿನಲ್ಲಿ ನಮಗೆ ಸೇರಿದ ಖಾಲಿ ನಿವೇಶನ ಹಾಗೂ ಮಾದೇಗೌಡರವರ ಜಾಗ ಇರುತ್ತದೆ. ಪಶ್ಚಿಮ ದಿಕ್ಕಿನಲ್ಲಿ ತುರಗನೂರು ನಾಲೆ ಇರುತ್ತದೆ ಎಂದರೆ ಸಾಕ್ಷಿಯು ನಮಗೆ ಸೇರಿದ ನಿವೇಶನ ಇದ್ದು, ತದನಂತರ ರಸ್ತೆ ಮತ್ತು ಆದಾದನಂತರ ಕಾಲುವೆ ಇರುತ್ತದೆ ಎಂದು ನುಡಿಯುತ್ತಾರೆ.

ವಾದಿಗಳಿಗೆ ಸೇರಿದ ಮನೆ ಮತ್ತು ತುರುಗನೂರು ನಾಲೆಯ ಮದ್ಯದಲ್ಲಿರುವ ಆಸ್ತಿ ವಾದಿಗಳಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. 1 ಗುಂಟೆ ಜಾಗಕ್ಕೆ 1089 ಚದರ ಅಡಿ ಇರುತ್ತದೆ. ಅದೇ ರೀತಿ 3 ¼ ಗುಂಟೆ ಜಾಗಕ್ಕೆ 3519 ಚದರ ಅಡಿ ಬರುತ್ತದೆ ಎಂದರೆ ಸಾಕ್ಷಿಯು ನಾನು ಲೆಕ್ಕ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗಳು ಕಟ್ಟಿರುವ ಮನೆ ಹಾಗೂ ನಾಲೆಯ ನಡುವೆ ಇರುವ ಜಾಗ ಸದರಿ 3519 ಚದರ ಅಡಿಯೊಳಗೆ ಇರುತ್ತದೆ ಎಂದರೆ ಸಾಕ್ಷಿಯು ನಾನು ಸರಿಯಾಗಿ ಲೆಕ್ಕ ಹಾಕಿರುವುದಿಲ್ಲ ಎಂದು ನುಡಿಯುತ್ತಾರೆ. ನಾಲೆ ಮತ್ತು ವಾದಿಗಳ ಮನೆಯ ನಡುವೆ 1 ¼ ಗುಂಟೆ ಜಾಗ ಇರುತ್ತದೆ. ಸದರಿ ಜಾಗದಲ್ಲಿ ವಾದಿಯು ತಿಪ್ಪೆಗುಂಡಿ ಹಾಕಿಕೊಂಡಿದ್ದು, ಸೌದೆಗಳನ್ನು ಹಾಕಿರುತ್ತಾರೆ ಹಾಗೂ ಹಸುಗಳನ್ನು ಕಟ್ಟಿರುತ್ತಾರೆ ಎಂದರೆ ಸರಿಯಲ್ಲ.

ಕುಂಟೆಗೌಡನ ಮಗ ಸಿಂಗ್ರೇಗೌಡ ನನಗೆ ಗೊತ್ತಿರುವುದಿಲ್ಲ. ಸಿದ್ದಮ್ಮ ಎನ್ನುವವರು ಸಿಂಗನ ಕುಂಟೇರವರ ಅಣ್ಣನ ಕುಂಟನಕರಗರವರ ಹೆಂಡತಿಯಾಗಿರುತ್ತಾರೆ. ಸದರಿಯವರು ನಮ್ಮ ಪೂರ್ವಿಕರು ಎಂದು ತೋರಿಸಲು ವಂಶವೃಕ್ಷವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀರಾ ಎಂದರೆ ಸಾಕ್ಷಿ ನನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ. ನಾನು ನ್ಯಾಯಾಲಯಕ್ಕೆ ಯಾವ ದಾಖಲೆಗಳನ್ನು ಹಾಜರುಪಡಿಸಿರುತ್ತೇನೆ ಎಂದು ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. ನಾನು ನಮ್ಮ ಮನೆಗೆ ಸಂಬಂಧಿಸಿದ ವಂಶವೃಕ್ಷವನ್ನು ನೋಡಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಸಿದ್ದಮ್ಮರವರು ನನಗೆ ಅಜ್ಜಿ ಆಗಬೇಕು. ಸದರಿಯವರು ನನ್ನ ತಂದೆಯ ತಂದೆರವರ ಅಣ್ಣನ ಹೆಂಡತಿಯಾಗಿರುತ್ತಾರೆ. ಸಿದ್ದಮ್ಮರವರಿಗೂ ನಮ್ಮಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಸಂಬಂಧ ಕಲ್ಪಿಸಿಕೊಂಡು ಬಂದಿರುತ್ತೇನೆ ಎಂದರೆ ಸರಿಯಲ್ಲ.

ನಾನು ನನ್ನ ಪ್ರತಿವಾದಪತ್ರದಲ್ಲಿ ಹೇಳಿರುವ 2 ಎಕರೆ 7 ಗುಂಟೆ ಜಾಗ ಸರ್ವೇ ನಂ.306/3 ರಲ್ಲಿ ಇರುತ್ತದೆ. ಎಸ್.ಮಹದೇವರವರು ನನ್ನ ತಂದೆಯ ಅಕ್ಕನ ಮಗ ಆಗಿರುತ್ತಾರೆ, ಸಾಕ್ಷಿ ಮುಂದುವರಿದು ಸದರಿಯವರು ನನ್ನ ಸೋದರ ಮಾವ ಆಗಬೇಕು ಎಂದು ನುಡಿಯುತ್ತಾರೆ.

ಮುಂದುವರೆದ ಪಾಟೀ ಸವಾಲಿಗಾಗಿ ವಾದಿ ಪರ ವಕೀಲರು ಸಮಯ ಕೋರಿದ್ದು ಮುಂದೂಡಲಾಯಿತು.

ನನ್ನ ಹೇಳಿಕೆಯ ಪ್ರಕಾರ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.

ಓ ಹೇ ಕೆ ಸರಿ ಇದೆ.

**ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ,**

**ನ್ಯಾಯಾಲಯ ತಿ.ನರಸೀಪುರ.**